# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 491 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ. ಹರೀಶ್‌ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 21-02-2022 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರಸಂ. | ಪ್ರಶ್ನೆ | ಉತ್ತರ |
|---|---|---|
| ಅ). | ಕೋವಿಡ್-19 ಸಾಂಕ್ರಾಮಿಕ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿಗಳಿಗೆ ನೀಡಬೇಕಾದ ಸವಲತ್ತುಗಳನ್ನು ನೀಡಲಾಗಿದೆಯೇ; | ನೀಡಲಾಗಿದೆ. |
| ಆ) | ಆಶಾ ಕಾರ್ಯಕರ್ತೆಯರಿಗೆ ಸರ್ಕಾರ ನೀಡುವ ಸಂಭಾವನೆ ಎಷ್ಟು ಹಾಗೂ ಇವರ ಕಾರ್ಯವ್ಯಾಪ್ತಿ ಏನು; ಆಶಾ ಕಾರ್ಯಕರ್ತರಿಗೆ ರಜಾ ಸೌಲಭ್ಯ ಇದೆಯೇ? | ಆಶಾ ಕಾರ್ಯಕರ್ತೆಯರು ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತೆಯಾಗಿದ್ದು, ಸ್ವಯಂ ಪ್ರೇರಿತ ನೆಲೆಗಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಇಲಾಖೆಯ ಪೂರ್ಣಾವಧಿ ಅಥವಾ ಗುತ್ತಿಗೆ/ಹೊರಗುತ್ತಿಗೆ ನೌಕರರಾಗಿರುವುದಿಲ್ಲ.<br>ಗ್ರಾಮಿಣ ಪ್ರದೇಶದಲ್ಲಿ ಪ್ರತಿ 1000 ಜನಸಂಖ್ಯೆಗೆ ಮತ್ತು ನಗರ ಪ್ರದೇಶದಲ್ಲಿ 2500 ಜನಸಂಖ್ಯೆಗೆ (ಕೊಳಗೇರಿ ಮತ್ತು ದುರ್ಬಲವರ್ಗದ ಪ್ರದೇಶಗಳಿಗೆ ಮಾತ್ರ) ಒಬ್ಬರಂತೆ ಆಶಾ ಕಾರ್ಯಕರ್ತೆಯರನ್ನು ಆಯ್ಕೆ ಮಾಡಲಾಗುತ್ತದೆ.<br>• ಆಶಾ ಕಾರ್ಯಕರ್ತೆಯರಿಗೆ ರಾಜ್ಯ ಸರ್ಕಾರದಿಂದ ಮಾಸಿಕ 4000 ರೂಪಾಯಿಗಳ ನಿಶ್ಚಿತ ಗೌರವಧನವನ್ನು ನೀಡಲಾಗುತ್ತಿದೆ.<br>• ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ ಎಂಟು ಆವರ್ತಕ ಮತ್ತು ನಿಯಮಿತ ಚಟುವಟಿಕೆಗಳಿಗೆ ಮಾಸಿಕ 2000 ರೂಪಾಯಿಗಳನ್ನು ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.<br>• ಕೋವಿಡ್-19 ನಿಯಂತ್ರಣ ಚಟುವಟಿಕೆಗಳಿಗೆ ಮಾಸಿಕ 1000 ರೂಪಾಯಿಗಳ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.<br>• ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ 29 ಚಟುವಟಿಕೆಗಳಿಗೆ ಕಾರ್ಯನಿರ್ವಹಣಾ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.<br>• ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರಿಗೆ ಮಾಸಿಕ 1000 ರೂಪಾಯಿಗಳ ಟೀಮ್ ಬೇಸ್ಡ್ ಇನ್ಸೆಂಟೀವ್ ಅನ್ನು ನೀಡಲಾಗುತ್ತಿದೆ.<br>ಆಶಾ ಕಾರ್ಯಕರ್ತೆಯರು ಮೂಲತಃ ಸ್ವಯಂ ಪ್ರೇರಿತ ನೆಲೆಗಟ್ಟಿನಲ್ಲಿ ಕಾರ್ಯ ನಿರ್ವಹಿಸುವ ಸಾಮಾಜಿಕ ಆರೋಗ್ಯ |

<table>
<tr><td></td><td></td><td>ಕಾರ್ಯಕರ್ತೆಯಾಗಿರುತ್ತಾರೆ. ಇವರು ಫಲಾನುಭವಿಗಳು ಹಾಗೂ ಸಾರ್ವಜನಿಕರ ನಡುವೆ ಸಮಯವನ್ನು ಹೊಂದಾಣಿಕೆ ಮಾಡಿಕೊಂಡು ಕರ್ತವ್ಯ ನಿರ್ವಹಿಸುವುದರಿಂದ ರಜೆ ತೆಗೆದುಕೊಳ್ಳುವ ಪರಿಸ್ಥಿತಿಯು ಉದ್ಭವಿಸುವುದಿಲ್ಲ.</td></tr>
<tr><td>ಇ)</td><td>ಆರೋಗ್ಯ ಇಲಾಖೆಯ ಕೋವಿಡ್-19 ಸಂದರ್ಭದಲ್ಲಿ ಸಿಬ್ಬಂದಿಗಳಿಗೆ "ರಿಸ್ಕ್ ಭತ್ಯೆ" ನೀಡಲಾಗಿದೆಯೇ; ನೀಡಿದ್ದಲ್ಲಿ ಎಷ್ಟು ಸಿಬ್ಬಂದಿಗಳಿಗೆ ನೀಡಲಾಗಿದೆ; ಹಾಗೂ "ರಿಸ್ಕ್ ಭತ್ಯೆ' ನೀಡಲು ಬಾಕಿ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು?</td><td>ಹೌದು.<br>1. ರಾಜ್ಯ ವಲಯದಲ್ಲಿ ಕೋವಿಡ್-19 ತುರ್ತು ಸಂದರ್ಭದಲ್ಲಿ ರಿಸ್ಕ್ ಭತ್ಯೆಯನ್ನು ನೀಡಲಾಗಿರುವ ಸಿಬ್ಬಂದಿಗಳ ಸಂಖ್ಯೆ ಮತ್ತು ರಿಸ್ಕ್ ಭತ್ಯೆ ನೀಡಲು ಬಾಕಿ ಇರುವ ಸಿಬ್ಬಂದಿಗಳ ಸಂಖ್ಯೆ ಈ ಕೆಳಕಂಡಂತಿದೆ.
<table>
<tr><td>ರಿಸ್ಕ್ ಭತ್ಯೆಯನ್ನು ನೀಡಲಾದ ಸಿಬ್ಬಂದಿಗಳ ಸಂಖ್ಯೆ:</td><td>7930</td></tr>
<tr><td>ರಿಸ್ಕ್ ಭತ್ಯೆ ನೀಡಲು ಬಾಕಿಯಿರುವ ಸಿಬ್ಬಂದಿಗಳ ಸಂಖ್ಯೆ:</td><td>1384</td></tr>
</table>
2. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ತಜ್ಞರು/ ಎಂಬಿಬಿಎಸ್ ವೈದ್ಯರು/ ಆಯುಷ್ ವೈದ್ಯರು/ ಶುಶ್ರೂಷಕಿಯರು/ ಎ.ಎನ್.ಎಂ/ ಲ್ಯಾಬ್‌ಟೆಕ್ನೀಷಿಯನ್/ ಫಾರ್ಮಾಸಿಸ್ಟ್‌ಗಳಿಗೆ ಕೋವಿಡ್-19 ರ ಸಾಂಕ್ರಾಮಿಕ ರೋಗ ನಿರ್ವಹಣೆಗಾಗಿ ಕೆಳಕಂಡಂತೆ ಮಾಸಿಕ ವಿಶೇಷ ಹೆಚ್ಚುವರಿ ಭತ್ಯೆಯನ್ನು ನೀಡಲಾಗಿದೆ.
<table>
<tr><td>ಕ್ರಸಂ</td><td>ಅವಧಿ</td><td>ವಿಶೇಷ ಹೆಚ್ಚುವರಿ ಭತ್ಯೆ ಪಡೆದ ಸಿಬ್ಬಂದಿಗಳ ಸಂಖ್ಯೆ</td></tr>
<tr><td>1</td><td>ಅಕ್ಟೋಬರ್ 2020- ಮಾರ್ಚ್ 2021</td><td>11,758</td></tr>
<tr><td>2</td><td>ಏಪ್ರಿಲ್ 2021- ಮೇ 2021</td><td>12,912</td></tr>
<tr><td colspan="3">ಜೂನ್ ಮತ್ತು ಜುಲೈ ಅವಧಿಯಲ್ಲಿ 12,912 ಸಿಬ್ಬಂದಿಗಳಿಗೆ ರಿಸ್ಕ್ ಭತ್ಯೆ ಪಾವತಿಯಾಗಿರುವುದಿಲ್ಲ.</td></tr>
</table>
</td></tr>
</table>

ಸಂಖ್ಯೆ: ಆಕುಕ 73 ಹೆಚ್‌ಎಸ್‌ಎಂ 2022

(ಡಾ. ಕೆ. ಸುಧಾಕರ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು